ದಿನಾಂಕಃ 05.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : 2ನೇ ಎದುರುದಾರರ ಪರ ವಕೀಲರಿಂದ :**

ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.

Authorization Letter ನ್ನು **ನಿ.ಆರ್-1** ಎಂದು, ವಿಮೆ ಪಾಲಿಸಿಯ ದೃಢೀಕೃತ ನಕಲನ್ನು **ನಿ.ಆರ್-2** ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಅರ್ಜಿದಾರರ ಪರ ವಕೀಲರಿಂದ :**

ಗೂಡ್ಸ್ ವಾಹನದಲ್ಲಿ ಡ್ರೈವರ್, ಕ್ಲೀನರ್ ಮತ್ತು ಸದರಿ ಸಾಮಾನುಗಳ ಮಾಲೀಕರು ಪ್ರಯಾಣ ಮಾಡಲು ವಿಮೆ ಕವರೇಜ್ ಇರುತ್ತದೆ ಎಂದರೆ ಸಾಕ್ಷಿ paid Driver, Cleaner, Loader ಇವರುಗಳಿಗೆ ಪ್ರತ್ಯೇಕವಾಗಿ ವಿಮೆ ಕಟ್ಟಿದ್ದರೇ ಕವರೇಜ್ ಇರುತ್ತದೆ ಎನ್ನುತ್ತಾರೆ. ಸಾಮಾನುಗಳ ಮಾಲೀಕರಿಗೆ ವಿಮೆ ಕವರೇಜ್ ಇರುತ್ತದೆಯೇ ಎಂದರೆ ಸುಳ್ಳು. ನಿ.ಆರ್-2 ರ ಪ್ರಕಾರ ಸಾಮಾನುಗಳ ಮಾಲೀಕರಿಗೆ ವಿಮೆ ಕವರೇಜ್ ಇರುತ್ತದೆ ಎಂದರೆ ಸುಳ್ಳು. ಅರ್ಜಿದಾರರು ಈ ಪ್ರಕರಣದಲ್ಲಿ ಹೇಳಿರುವ ವಾಹನದಲ್ಲಿ ಅವರ ಸರಕುಗಳನ್ನು ಹಾಕಿಕೊಂಡು ಸರಕುಗಳ ಮಾಲೀಕರಾಗಿ ಆ ದಿನ ಪ್ರಯಾಣ ಮಾಡುತ್ತಿದ್ದರು ಎಂದರೆ ಸುಳ್ಳು. ನಾವು ನ್ಯಾಯಾಲಯಕ್ಕೆ ಸಾಕ್ಷಿ ಹೇಳುವುದಕ್ಕೆ ಬರುವುದಕ್ಕಿಂತ ಮುಂಚೆ ನಮ್ಮ ಸಂಸ್ಥೆಯಿಂದ ತನಿಖೆ ಮಾಡಿಸಿ, ವರದಿ ಪರಿಶೀಲಿಸಿ ಹಾಗೂ ಪೊಲೀಸರ ದಾಖಲೆಗಳನ್ನು ನೋಡಿ ಬರುತ್ತೇವೆ ಎಂದರೆ ಸರಿ. ನಿಪಿ-6 ಮತ್ತು

7 ರಲ್ಲಿ ಅರ್ಜಿದಾರರು ಸರಕುಗಳ ಮಾಲೀಕರಾಗಿ ವಾಹನದಲ್ಲಿ ಪ್ರಯಾಣಿಸುತ್ತಿದ್ದರು ಎಂದರೆ ಸಾಕ್ಷಿ ಅವರು ಆ ರೀತಿ ಪ್ರಯಾಣಿಸುತ್ತಿರಲಿಲ್ಲ ಎನ್ನುತ್ತಾರೆ. ಸಾಧ್ಯವಾದರೇ ಪರಿಹಾರ ಕೊಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**